# ಸೂಕ್ತಿಪ್ರಭ

ಮಿತ್ರರ ದುಃಖದಿಂದ ದುಃಖಿಯಾಗದೆ ಇರುವವನನ್ನು ನೋಡಿದರೂ ಮಹಾಪಾಪ ತಗುಲೀತು. ಬೆಟ್ಟದಂತಹ ತನ್ನ ದುಃಖವನ್ನು ಧೂಳಿನ ಕಣದಂತೆ ಕಂಡು, ಧೂಳಿ ಕಣದಂತಿರುವ ಮಿತ್ರನ ದುಃಖವನ್ನು ಮೇರುಪರ್ವತದಂತೆ ನೋಡಬೇಕು. ಸಹಜವಾಗಿ ಇಂತಹ ಲಕ್ಷಣಗಳಿಲ್ಲದವರು ಶಠರು.

—ಶ್ರೀರಾಮಚರಿತಮಾನಸ

ಕೆಟ್ಟ ಮಾರ್ಗದಲ್ಲಿ ಹೋಗುತ್ತಿರುವ ಮಿತ್ರನನ್ನು ತಡೆದು ಒಳ್ಳೆಯ ಮಾರ್ಗಕ್ಕೆ ಹಚ್ಚುವುದೇ ಮಿತ್ರನ ಧರ್ಮವಾಗಿದೆ. ಯಾವಾಗಲೂ ಮಿತ್ರನ ಗುಣಗಳನ್ನು ಪ್ರಕಟಿಸಬೇಕು, ದೋಷಗಳನ್ನು ಅಡಗಿಸಿಟ್ಟಿರಬೇಕು. ಕೊಂಡುಕೊಳ್ಳುವ ವಿಷಯದಲ್ಲಿ ಮನದಲ್ಲಿ ಸಂಶಯವನ್ನು ಇರಿಸಿಕೊಳ್ಳಬಾರದು.

—ಶ್ರೀರಾಮಚರಿತಮಾನಸ

ಎದುರಿಗೆ ಸಿಹಿಯಾಗಿ ಮಾತನ್ನಾಡಿ ಬೆನ್ನಹಿಂದೆ ಇರಿಯುವವರು ಕುಟಿಲ ಮನಸ್ಸುಳ್ಳವರು. ಅಂತಹವರ ಮನಸ್ಸು ಹಾವಿನ ಚಲನೆಯಂತೆ ಅಕ್ರವಕ್ರವಾಗಿರುತ್ತದೆ. ಇಂತಹ ಕುಟಿಲರನ್ನು ತೊರೆಯುವುದೇ ಲೇಸು. ಮೂರ್ಖನಾದ ಸೇವಕ, ಕೃಪಣನಾದ ರಾಜ, ಕುಲಟೆಯಾದ ಹೆಂಡತಿ, ಕಪಟಿಯಾದ ಸ್ನೇಹಿತ—ಇವರು ನಾಲ್ವರು ಶೂಲದಂತೆ ದುಃಖವನ್ನು ಕೊಡುವವರು. —ಶ್ರೀರಾಮಚರಿತಮಾನಸ

ಪ್ರತಿಯೊಬ್ಬನಿಗೂ ತಾನು ಸ್ವತಃ ಕಂಡ ಬೆಳಕಿನಿಂದ ಮಾತ್ರವೇ ಮುಕ್ತಿ. ಮಾನವನು ತನ್ನಿಂದ ತಾನೇ ಕೆಡುತ್ತಾನೆ, ತನ್ನಿಂದ ತಾನೇ ಉದ್ಧಾರವಾಗುತ್ತಾನೆ. ಇತರರನ್ನು ನಾನು ಉಳಿಸುತ್ತೇನೆ ಎಂದವನಿಗೆ ನರಕ ತಪ್ಪಿದ್ದಲ್ಲ. ನಾನು ಇತರರಿಂದ ಉದ್ಧಾರವಾಗುತ್ತೇನೆ ಎಂಬುವವನಿಗೆ ಬಂಧನ ತಪ್ಪಿದ್ದಲ್ಲ.

—ಮಹಾವೀರ

**ಅರ್ಥರೇಖೆ ಇದ್ದಲ್ಲಿ ಫಲವೇನು**
**ಆಯುಷ್ಯರೇಖೆ ಇಲ್ಲದನ್ನಕ್ಕ?**
**ಹಂದೆಯ ಕೈಯಲ್ಲಿ ಚಂದ್ರಾಯುಧವಿರ್ದು ಫಲವೇನು?**
**ಅಂಧಕನ ಕೈಯಲ್ಲಿ ದರ್ಪಣವಿರ್ದು ಫಲವೇನು?**
**ಮರ್ಕಟನ ಕೈಯಲ್ಲಿ ಮಾಣಿಕ್ಯವಿರ್ದು ಫಲವೇನು?**
**ನಮ್ಮ ಕೂಡಲಸಂಗನ ಶರಣರನರಿಯದವರ ಕೈಯಲ್ಲಿ**
**ಲಿಂಗವಿರ್ದು ಫಲವೇನು, ಶಿವಪಥವನರಿಯದನ್ನಕ್ಕ?**

—ಬಸವೇಶ್ವರ

**ಹಾವು ತಿಂದವರ ನುಡಿಸಬಹುದು;**
**ಗರ ಹೊಡೆದವರ ನುಡಿಸಬಹುದು;**
**ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ!**
**ಬಡತನವೆಂಬ ಮಂತ್ರವಾದಿ ಹೊಗಲು ಒಡನೆ ನುಡಿವರಯ್ಯಾ**
**ಕೂಡಲಸಂಗಮದೇವಾ.**

—ಬಸವೇಶ್ವರ

# ಪ್ರಾರ್ಥನೆ

## ಅಹಲ್ಯಾಕೃತ ರಾಮಸ್ತೋತ್ರಮ್

ಯತ್ಪಾದಪಂಕಜ–ಪರಾಗ–ಪವಿತ್ರಗಾತ್ರಾ
ಭಾಗೀರಥೀ ಭವ–ವಿರಿಂಚಿಮುಖಾನ್ಪುನಾತಿ ।
ಸಾಕ್ಷಾತ್ಸ ಏವ ಮಮ ದೃಗ್ವಿಷಯೋ ಯದಾऽऽಸ್ತೇ
ಕಿಂ ವರ್ಣ್ಯತೇ ಮಮ ಪುರಾಕೃತ–ಭಾಗಧೇಯಮ್ ॥

ಯಾರ ಪಾದಕಮಲಗಳ ಪರಾಗಧೂಳಿಯಿಂದ ಪವಿತ್ರಳಾದ ಭಾಗೀರಥಿಯು ಶಂಕರ ಬ್ರಹ್ಮರೇ ಮೊದಲಾದವರನ್ನು ಪವಿತ್ರಗೊಳಿಸುವಳೊ ಅಂಥ ನೀನು ಪ್ರತ್ಯಕ್ಷ ನನ್ನ ಕಣ್ಣೆದುರು ಪ್ರಾಪ್ತನಾಗಿರುವಾಗ ಪೂರ್ವಜನ್ಮದಲ್ಲಿ ನಾನು ಮಾಡಿದ ಪುಣ್ಯವನ್ನು ಎಷ್ಟೆಂದು ಬಣ್ಣಿಸಬೇಕು?

ಮರ್ತ್ಯಾವತಾರೇ ಮನುಜಾಕೃತಿಂ ಹರಿಂ
ರಾಮಾಭಿಧೇಯಂ ರಮಣೀಯದೇಹಿನಮ್ ।
ಧನುರ್ಧರಂ ಪದ್ಮ–ವಿಶಾಲ–ಲೋಚನಂ
ಭಜಾಮಿ ನಿತ್ಯಂ ನ ಪರಾನ್–ಭಜಿಷ್ಯೇ ॥

ಕಮಲದಂತೆ ದೊಡ್ಡ ಕಣ್ಣುಳ್ಳ, ಮನೋಹರ ದೇಹವುಳ್ಳ, ಧನುಸ್ಸನ್ನು ಧರಿಸಿದ, ಮರ್ತ್ಯಲೋಕದಲ್ಲಿ ಮನುಷ್ಯ ರೂಪ ತಾಳಿರುವ, 'ರಾಮ'ನೆಂದು ಕರೆಯಲ್ಪಡುವ ವಿಷ್ಣುವನ್ನು ನಾನು ನಿತ್ಯವೂ ಭಜಿಸುವೆ. ಮತ್ತಾರನ್ನೂ ಭಜಿಸಲಾರೆ.

ಯತ್ಪಾದ-ಪಂಕಜರಜಃ ಶ್ರುತಿಭಿರ್ವಿಮೃಗ್ಯಂ
ಯನ್ನಾಭಿ-ಪಂಕಜ-ಭವಃ ಕಮಲಾಸನಶ್ಚ ।
ಯನ್ನಾಮಸಾರ ರಸಿಕೋ ಭಗವಾನ್ ಪುರಾರಿಸ್ತಂ
ರಾಮಚಂದ್ರಮನಿಶಂ ಹೃದಿ ಭಾವಯಾಮಿ ॥

ವೇದಗಳು ಯಾರ ಚರಣಕಮಲಗಳ ಪರಾಗವನ್ನು ಶೋಧಿಸುವುವೊ, ಬ್ರಹ್ಮನು ಯಾರ ನಾಭಿಕಮಲದಿಂದ ಜನಿಸಿದನೊ, ತ್ರಿಪುರಸಂಹಾರಕ ಶಂಕರನು ಯಾರ ನಾಮತತ್ತ್ವದಲ್ಲಿ ಅಭಿರುಚಿಯುಳ್ಳವನಾಗಿರುವನೊ ಆ ರಾಮಚಂದ್ರನನ್ನು ನಾನು ಯಾವಾಗಲೂ ಹೃದಯದಲ್ಲಿ ಧ್ಯಾನಿಸುವೆ.

ಸೋಽಯಂ ಪರಾತ್ಮಾ ಪುರುಷಃ ಪುರಾಣ
ಏಕಃ ಸ್ವಯಂಜ್ಯೋತಿರನಂತ ಆದ್ಯಃ ।
ಮಾಯಾತನುಂ ಲೋಕವಿಮೋಹನೀಯಾಂ
ಧತ್ತೇ ಪರಾನುಗ್ರಹ ಏಷ ರಾಮಃ ॥

ಎಲ್ಲರ ಅಂತರಂಗದಲ್ಲಿರುವ ಪುರಾಣ ಪುರುಷನು, ಏಕನು; ಇವನೇ ಜ್ಞಾನಜ್ಯೋತಿಯು; ಸ್ವರೂಪಗಳ ಕೊನೆಯಿಲ್ಲದವನು, ಎಲ್ಲದರ ಆದಿ ಕಾರಣನು, ಭಕ್ತರಿಗೆ ಅನುಗ್ರಹ ಮಾಡುವವನು, ಇವನೇ ರಾಮನು—ಲೋಕವನ್ನೇ ಮೋಹಗೊಳಿಸುವಂತಹ ಮಾಯಾಶರೀರವನ್ನು ಧರಿಸಿರುವವನು.